# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ-2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಸೋಮವಾರ, ದಿನಾಂಕ: 08ನೇ ನವೆಂಬರ್, 2021**

**ಸಂಖ್ಯೆ: 69**

ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಮಾನ್ಯ ಶಾಸಕರುಗಳ ಅಪ್ರತಿಮ ಸಾಧನೆ ಹಾಗೂ ಪ್ರತಿಭೆಗಳನ್ನು ಗುರುತಿಸಿ ಉತ್ತೇಜನ ನೀಡಲು ಪ್ರತಿ ವರ್ಷವೂ ಒಬ್ಬ ಮಾನ್ಯ ವಿಧಾನ ಪರಿಷತ್ತಿನ ಶಾಸಕರಿಗೆ **"ಅತ್ಯುತ್ತಮ ಶಾಸಕ ಪ್ರಶಸ್ತಿ"** ನೀಡಲು ತೀರ್ಮಾನಿಸಲಾಗಿರುತ್ತದೆ.

ಈ ಸಂಬಂಧ ಅನುಸರಿಸಲಾಗುವ ಮಾರ್ಗಸೂಚಿಗಳ ಪ್ರತಿಯನ್ನು ಮಾನ್ಯ ಶಾಸಕರುಗಳ ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗುತ್ತಿದೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ,

# ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

# "ಅತ್ಯುತ್ತಮ ಶಾಸಕ ಪ್ರಶಸ್ತಿ"

## ಮಾರ್ಗಸೂಚಿಗಳು

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನಸೌಧ, ಬೆಂಗಳೂರು,
2021

# ಕರ್ನಾಟಕ ವಿಧಾನ ಪರಿಷತ್ತು

## "ಅತ್ಯುತ್ತಮ ಶಾಸಕ ಪ್ರಶಸ್ತಿ"

## ಆಯ್ಕೆ ಕುರಿತು ಮಾರ್ಗಸೂಚಿಗಳು

ನಮ್ಮ ಸಂವಿಧಾನಲ್ಲಿನ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಪೈಕಿ ವೈಚಾರಿಕವಾಗಿ ಶಾಸಕಾಂಗವು ಬಹಳ, ಪ್ರಮುಖವೆನಿಸಿಕೊಳ್ಳುತ್ತದೆ. ಸಂಸತ್ತು ಮತ್ತು ವಿಧಾನಮಂಡಲಗಳಲ್ಲಿ ಪ್ರತಿನಿಧಿಗಳು ಜನರಿಂದ ನೇರವಾಗಿ ಆಯ್ಕೆಯಾಗಿ ಬರುವುದರಿಂದ ಅವರುಗಳಿಗೆ ಸಾಮಾನ್ಯ ಜನರ ಹಾಗೂ ಸಮಾಜದ ಎಲ್ಲಾ ಆಗುಹೋಗುಗಳ ಅರಿವಿರುತ್ತದೆ ಮತ್ತು ಅವರುಗಳು ಜನರ ಸಮಸ್ಯೆಗಳನ್ನು ಚೆನ್ನಾಗಿ ಅರಿತಿದ್ದು, ಅದನ್ನು ಪರಿಹರಿಸಲು ಉತ್ತಮವಾದ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಕಾರ್ಯಾಂಗದ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಸಹಕರಿಸುತ್ತಾರೆ. ಇಂತಹ ಜನಪ್ರತಿನಿಧಿಗಳು ತಮ್ಮ ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುವಾಗ ಅನೇಕ ಸಮಸ್ಯೆಗಳನ್ನು, ಏಳು ಬೀಳುಗಳನ್ನು ಎದುರಿಸಿದರೂ ಅವುಗಳನ್ನು ನಿಭಾಯಿಸುವಾಗ ಸಂಸದೀಯ ಕಾರ್ಯವಿಧಾನಗಳ ನಿಯಮಗಳನ್ನು ಹಾಗೂ ಪದ್ಧತಿಗಳನ್ನು ಸಮಗ್ರವಾಗಿ ತಿಳಿದುಕೊಂಡು ಹೆಚ್ಚಿನ ಹೊಣೆಗಾರಿಕೆಯಿಂದ ಕಾರ್ಯಗಳನ್ನು ನಿರ್ವಹಿಸುವ ಜನಪ್ರತಿನಿಧಿಗಳ ಪರಿಶ್ರಮ ಹಾಗೂ ಪ್ರತಿಭೆಗಳನ್ನು ಗುರುತಿಸಿದ್ದಲ್ಲಿ ಇದರಿಂದ ಪ್ರೋತ್ಸಾಹಗೊಂಡು ಇಂದಿನ ಪೀಳಿಗೆಯಲ್ಲಿ ಇನ್ನೂ ಉತ್ತಮ ಜನಪ್ರತಿನಿಧಿಗಳು ಹೊರಹೊಮ್ಮುತ್ತಾರೆ.

ಇಂತಹ ಮಹತ್ತರ ಉದ್ದೇಶದಿಂದ ಭಾರತದ ಸಂಸತ್ತಿನ ಉಭಯ ಸದನಗಳಾದ ರಾಜ್ಯ ಸಭೆ ಮತ್ತು ಲೋಕ ಸಭೆ ತನ್ನ ಹಾಲಿ ಸದಸ್ಯರುಗಳ ಅಸಾಧಾರಣ ಸಾಧನೆಯನ್ನು ಗುರುತಿಸಿ 1995ರಿಂದ "ಅಸಾಧಾರಣ ಸಂಸದೀಯ ಪಟು" ಪ್ರಶಸ್ತಿಯನ್ನು ನೀಡುತ್ತಾ ಬಂದಿವೆ. ಅಸ್ಸಾಂ, ರಾಜಸ್ಥಾನ, ಜಾರ್ಖಂಡ್, ಉತ್ತರಖಂಡ್, ಗುಜರಾತ್ ಮುಂತಾದ ಹಲವು ರಾಜ್ಯಗಳಲ್ಲೂ ಸಹ ವಿಧಾನ ಸಭೆಯ ಹಾಲಿ ಸದಸ್ಯರಗಳಿಗೆ "ಅತ್ಯತ್ತಮ ಶಾಸಕ" ಎಂಬ ಪ್ರಶಸ್ತಿಯನ್ನು ನೀಡುತ್ತಿವೆ.

---2

ಉತ್ತರಖಂಡದ ಡೆಹ್ರಾಡೂನ್‌ನಲ್ಲಿ ನಡೆದ 79ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ವಿಧಾನಮಂಡಲಗಳಲ್ಲಿ ಚರ್ಚೆಗಳ ಗುಣಮಟ್ಟವನ್ನು ವೃದ್ಧಿಸಲು, ಸದಸ್ಯರು ಸದನದ ನಿಯಮಗಳು, ಕಾರ್ಯವಿಧಾನ ಹಾಗೂ ಚರ್ಚಿಸುವ ಸಾಮರ್ಥ್ಯ ಇತ್ಯಾದಿಗಳನ್ನು ಪರಿಗಣಿಸಿ ಸಂಸತ್ತಿನಲ್ಲಿ ಹಾಲಿ ವರ್ಷಕ್ಕೊಮ್ಮೆ ನೀಡಲಾಗುತ್ತಿರುವ "ಅತ್ಯುತ್ತಮ ಸಂಸದೀಯ ಪಟು" ಎಂಬ ಪ್ರಶಸ್ತಿಯನ್ನು ಎಲ್ಲಾ ರಾಜ್ಯಗಳಲ್ಲೂ ನೀಡುವುದು ಅವಶ್ಯಕವೆಂಬ ಒಮ್ಮತದ ಪ್ರಸ್ತಾವವನ್ನು ಅಂಗೀಕರಿಸಲಾಗಿದೆ. ನಮ್ಮ ರಾಜ್ಯದಲ್ಲಿಯು ಸಹ ಈ ಹಿಂದಿನ ಕೆಲವೊಂದು ವಿಧಾನಸಭಾ ಅವಧಿಗಳಲ್ಲಿ ಇಂತಹ ಪ್ರಶಸ್ತಿಯನ್ನು ಮಾನ್ಯ ಸದಸ್ಯರಿಗೆ ನೀಡಲಾಗಿದೆ.

ಈ ಹಿನ್ನಲೆಯಲ್ಲಿ ಅತ್ಯುತ್ತಮವಾಗಿ ಕ್ರಮಬದ್ಧವಾಗಿ ಶಾಸನ ಸಭೆಗಳನ್ನು ನಡೆಸುತ್ತದೆಯೆಂಬ ಹೆಗ್ಗಳಿಕೆಗೆ ಪಾತ್ರವಾದ ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಸಹ ಸನ್ಮಾನ್ಯ ಸಭಾಪತಿಯವರು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಪ್ರತಿವರ್ಷ ಮಾನ್ಯ ಶಾಸಕರೊಬ್ಬರಿಗೆ "ಅತ್ಯುತ್ತಮ ಸಂಸದೀಯ ಪಟು" ಅಥವಾ "ಅತ್ಯುತ್ತಮ ಶಾಸಕ" ಎಂಬ ಪ್ರಶಸ್ತಿಯನ್ನು ನೀಡುವುದು ಅವಶ್ಯಕವೆಂದು ಪರಿಗಣಿಸಿ, ಸದರಿ ಪ್ರಶಸ್ತಿಯನ್ನು ನೀಡಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅಂಗೀಕರಿಸಿರುತ್ತಾರೆ.

## ಮಾರ್ಗಸೂಚಿಗಳು

01. ತಮ್ಮ ಮತಕ್ಷೇತ್ರಗಳಲ್ಲಿ ಶಾಸಕರಾಗಿ ಕಾರ್ಯನಿರ್ವಹಿಸಿ ಗಳಿಸಿರುವ ಅನುಭವ ಪರಿಗಣನೆ
02. ಸದನದಲ್ಲಿ ನಡೆಯುವ ಚರ್ಚೆಗಳಲ್ಲಿ ಮಾನ್ಯ ಸದಸ್ಯರು ತೋರಿಸುವ ಕೌಶಲ್ಯ
03. ಸಾರ್ವಜನಿಕ ಹಿತಾಸಕ್ತಿ ಇರುವಂತಹ ವಿಷಯಗಳ ಬಗ್ಗೆ ಮಾನ್ಯ ಸದಸ್ಯರಿಗೆ ಇರುವ ಆಸಕ್ತಿ
04. ಸದನದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಿಸುವ ವಿಷಯ ಹಾಗೂ ಅದರ ಗಂಭೀರತೆಯ ಪರಿಗಣನೆ
05. ಸದನದಲ್ಲಿ ವಿಷಯಗಳನ್ನು ಪ್ರಸ್ತುತ ಪಡಿಸುವ ವಿಧಾನ ಹಾಗೂ ಸದನದ ಸಂಪ್ರದಾಯಗಳ ಬಗ್ಗೆ ಅವರಿಗೆ ಇರುವ ಮನೋಭಾವನೆ
06. ಕನ್ನಡ ಭಾಷೆಯಲ್ಲಿ ಹೊಂದಿರುವ ಪಾಂಡಿತ್ಯ
07. ಸದನದ ಒಳಗೆ ಹಾಗೂ ಹೊರಗೆ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ಅರಿವು ಮತ್ತು ಅವುಗಳ ಪಾಲನೆ
08. ಮಾನ್ಯ ಸಭಾಪತಿಯವರು ನೀಡುವ ಸೂಚನೆಗಳನ್ನು ಅನುಸರಿಸಲು ಗ್ರಹಿಸುವಲ್ಲಿನ ಸಾಮರ್ಥ್ಯ
09. ವಿಧಾನ ಮಂಡಲದ ಜಂಟಿ ಸಮಿತಿ/ ವಿಧಾನ ಪರಿಷತ್ತಿನ ಸಮಿತಿಗಳಲ್ಲಿನ ಭಾಗವಹಿಸುವಿಕೆ

10. ಶಾಸಕರಾಗಿ ಸದನದ ಒಳಗೆ ಹಾಗೂ ಹೊರಗೆ ಮಾನ್ಯ ಶಾಸಕರ ನಡವಳಿಕೆ
11. ಸದನದಲ್ಲಿ ಹಾಜರಾತಿ
12. ಇತರೆ ಶಾಸಕರುಗಳೊಂದಿಗೆ ತೋರ್ಪಡಿಸುವ ಸೌಹಾರ್ದಯುತ ಸಂಬಂಧ
13. ಸದನದಲ್ಲಿ ಕೇಳಲಾದ ಪ್ರಶ್ನೆಗಳ ಗುಣಮಟ್ಟ, ವ್ಯಾಪ್ತಿ ಮತ್ತು ಪ್ರಸ್ತುತ ಪಡಿಸುವ ವಿಧಾನ
14. ಸದನದಲ್ಲಿ ಉಂಟಾಗುವ ಪ್ರತಿರೋಧದ ಪರಿಸ್ಥಿತಿಗಳ ಕಾರ್ಯನಿರ್ವಹಣೆ ಸಂದರ್ಭದಲ್ಲಿ ತೋರಿಸುವ ಸಹಕಾರ

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಪ್ರಶಸ್ತಿಗೆ ಮಾನ್ಯ ಶಾಸಕರನ್ನು ಆಯ್ಕೆ ಮಾಡಲು ಈ ಕೆಳಕಂಡಂತೆ ಸಮಿತಿಯನ್ನು ಮಾನ್ಯ ಸಭಾಪತಿಯವರು ರಚಿಸಿರುತ್ತಾರೆ.

| | | |
|---|---|---|
| 1 | ಮಾನ್ಯ ಸಭಾಪತಿಯವರು | ಅಧ್ಯಕ್ಷರು |
| 2 | ಮಾನ್ಯ ಉಪಸಭಾಪತಿಯವರು | ಸದಸ್ಯರು |
| 3 | ಮಾನ್ಯ ಸಭಾನಾಯಕರು | ಸದಸ್ಯರು |
| 4 | ಮಾನ್ಯ ವಿರೋಧ ಪಕ್ಷದ ನಾಯಕರು | ಸದಸ್ಯರು |
| 5 | ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು | ಸದಸ್ಯರು |

ಸದರಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ಕಾರ್ಯನಿರ್ವಹಿಸತಕ್ಕದ್ದು.

**ಸಮಿತಿಯ ಕಾರ್ಯಗಳು:**

1. ಆಯ್ಕೆ ಸಮಿತಿಯು ಮಾರ್ಗಸೂಚಿಯ ಅನ್ವಯ ಶಾಸಕರನ್ನು ಆಯ್ಕೆ ಮಾಡತಕ್ಕದ್ದು. ಆದರೆ ಮಾನ್ಯ ಸಭಾಪತಿಯವರ ನಿರ್ಣಯವೇ ಅಂತಿಮವಾಗಿರತಕ್ಕದ್ದು.
2. ಆಯ್ಕೆ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಪ್ರಶಸ್ತಿಯ ಘೋಷಣೆ ಮಾಡತಕ್ಕದ್ದು ಹಾಗೂ ಘೋಷಣೆಯ ಮೊದಲು ಪ್ರಶಸ್ತಿಯನ್ನು ಸ್ವೀಕರಿಸಲು ಸಂಬಂಧಪಟ್ಟ ಶಾಸಕರಿಂದ ಒಪ್ಪಿಗೆಯನ್ನು ಪಡೆಯತಕ್ಕದ್ದು.

3. ಈ ಪ್ರಶಸ್ತಿಯನ್ನು ಶಾಸಕರಿಗೆ, ಶಾಸಕರಾಗಿ ಅವರ ಜೀವಮಾನದಲ್ಲಿ ಒಮ್ಮೆ ಮಾತ್ರ ನೀಡತಕ್ಕದ್ದು.
4. **ಸಭಾಪತಿಯವರು, ಉಪ ಸಭಾಪತಿಯವರು, ಸಂಸದೀಯ ಪದಾಧಿಕಾರಿಗಳು, ಸಚಿವ ಸಂಪುಟ ಸದಸ್ಯರು ಹಾಗೂ ಸಂಸದೀಯ ಕಾರ್ಯದರ್ಶಿಗಳನ್ನು ಈ ಪ್ರಶಸ್ತಿಗೆ ಪರಿಗಣಿಸತಕ್ಕದ್ದಲ್ಲ.**
5. ಪ್ರಶಸ್ತಿಯನ್ನು ನೀಡಲು ರಚಿಸಲಾಗಿರುವ ಆಯ್ಕೆ ಸಮಿತಿಯು ಯಾವುದೇ ಒಂದು ವರ್ಷದಲ್ಲಿ ಪ್ರಶಸ್ತಿಯನ್ನು ನೀಡಬಾರದೆಂದು ಪರಿಗಣಿಸಿದಲ್ಲಿ ಅದೇ ರೀತಿ ಶಿಫಾರಸ್ಸು ಮಾಡಬಹುದಾಗಿದೆ.

**ಪ್ರಶಸ್ತಿ:**

ಅತ್ಯುತ್ತಮ ಶಾಸಕ ಪ್ರಶಸ್ತಿಯು ಮಾನ್ಯ ಸಭಾಪತಿಯವರ ಸಹಿಯುಳ್ಳ ಪ್ರಶಸ್ತಿಯ ಪತ್ರ ಮತ್ತು ಕರ್ನಾಟಕದ ವಿಧಾನಸೌಧ ಕಟ್ಟಡದ ಮುದ್ರೆಯುಳ್ಳ ಬೆಳ್ಳಿ ಪದಕವನ್ನು ಒಳಗೊಳ್ಳತಕ್ಕದ್ದು.

**ಪ್ರಶಸ್ತಿ ಪ್ರದಾನ ಸಮಾರಂಭ:**

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಸಲಹೆ ಮಾಡಲಾದ ರೀತಿಯಲ್ಲಿ ಪ್ರಶಸ್ತಿ ವಿತರಣಾ ಸಮಾರಂಭವನ್ನು ಆಯೋಜಿಸುವುದು.

ಮಾನ್ಯ ಸಭಾಪತಿಯವರ ಆದೇಶಾನುಸಾರ,

(ಕೆ.ಆರ್. ಮಹಾಲಕ್ಷ್ಮಿ)
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.